ಸಿ.ಸಿ ನಂಃ 410/2025

ಪಿ ಡಬ್ಲುಃ 01.

ಸಾಕ್ಷಿಯನ್ನು ದಿನಾಂಕಃ **06.08.2026** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಪಿ.ಜಿ.ಟಿ. ವಕೀಲರಿಂದಃ**

ಆರೋಪಿಯು ಬಶೀರ ಪಟೇಲ ರವರು ಪಡೆದ ಸಾಲಕ್ಕೆ ಜಾಮೀನುದಾರರಾಗಿದ್ದಾರೆ. ಸಾಲಗಾರರು ವ್ಯಾಪಾರದ ಸಲುವಾಗಿ ಸಾಲವನ್ನು ಪಡೆದಿದ್ದಾರೆ ಹಾಗೂ ನಾವು ಅವರ ವ್ಯಾಪಾರ ವೈವಾಟಿನ ಕುರಿತಾದ ದಾಖಲೆಗಳನ್ನು ಪಡೆದಿಲ್ಲ. ಸಾಲಗಾರರು ಸಾಲ ಪಡೆದ ತರುವಾಯ ಒಂದೇ ಕಂತನ್ನು ತುಂಬಿದ್ದಾರೆ. ಸಾಲಗಾರರು ನಮ್ಮ ಬ್ಯಾಂಕಿನಲ್ಲಿ ಪಿಗ್ಮಿ ತುಂಬುತ್ತಿದ್ದರು.

ಸಾಲ ಮಂಜೂರು ಮಾಡಿದ 5–6 ವರ್ಷಗಳ ತರುವಾಯ ನಾವು ಈ ಪ್ರಕರಣವನ್ನು ದಾಖಲಿಸಿದ್ದೇವೆ. ಆರೋಪಿಯು ದಿನಾಂಕಃ 10.01.2025 ರಂದು ನಿ.ಪಿ. 1 ರ ಚೆಕ್ಕನ್ನು ನೀಡಿದ್ದಾನೆ. ಸಾಲ ಮಂಜೂರು ಮಡಿದ ತರುವಾಯ ನಾವು ಸಾಲಗಾರರ ಮೇಲೆ 2024 ನೇ ಸಾಲಿನಲ್ಲಿ ಆರ್ಬಿಟ್ರೇಷನ್ ಪ್ರಕರಣವನ್ನು ದಾಖಲಿಸಿದ್ದೇವೆ. ನಾನು ಮೇನೇಜರ್ ಆಗಿ ಬಂದ ನಂತರ ಸಾಲಗಾರರಿಗೆ ಬ್ಯಾಂಕನಿಂದ ನೋಟಿಸನ್ನು ನೀಡಿದ್ದೆನು, ಆದರೆ ಸದ್ರಿ ದಾಖಲೆಗಳನ್ನು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಸಾಲಗಾರರ ಸಾಲದ ಅರ್ಜಿ ಹಾಗೂ ಇನ್ನಿತರ ದಾಖಲೆಗಳನ್ನು ನಾವು ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನಾವು ಸಾಲಗಾರರ ಖಾತಾ ಸ್ಟೇಟಮೆಂಟ ಪ್ರತಿಯನ್ನು ನಿ.ಪಿ. 5 ರಂತೆ ಹಾಜರುಪಡಿಸಿದ್ದೇವೆ. ಸಾಲಗಾರರ 2025 ನೇ ಸಾಲಿನ ಖಾತಾ ಸ್ಟೇಟಮೆಂಟನ್ನು ಹಾಜರುಪಡಿಸಲು ನಮಗೆ ತೊಂದರೆ ಇರಲಿಲ್ಲ.

ಸಾಲದ ಅಸಲು ಮತ್ತು ಬಡ್ಡಿ ಎಷ್ಟಿದೆ ಎಂಬುದನ್ನು ಲೆಡ್ಜರ್ ನೋಡಿ ಹೇಳಬೇಕಾಗುತ್ತದೆ. ಆರೋಪಿಯು ನಿಪಿ1ರ ಚೆಕ್ಕನ್ನು ಬರೆದುಕೊಂಡು ಬಂದಿದ್ದರು ಹಾಗೂ ನನ್ನ ಎದುರಿಗೆ ನಿ.ಪಿ. 1 ರ ಮೇಲೆ ಸಹಿಯನ್ನು ಹಾಕಿದ್ದಾರೆ. ನಾನು ಮಾನ್ಯ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರ.ದ.ನ್ಯಾದಂ., ಹೊನ್ನಾವರ.